# ಬಿ.ಎಸ್.ಎನ್.ಎಲ್.ನೌಕರರ ಹೌಸಿಂಗ್ ಸಹಕಾರ ಸಂಘ (ನಿ)

ಹೊಸ ನಂ. ಎಫ್–3/9, 2ನೇ ಕ್ರಾಸ್, ಶಂಕರಮಠದ ರಸ್ತೆ, ಫೋರ್ಟ್ ಮೊಹಲ್ಲಾ ಮೈಸೂರು–570 004

## 2023–2024 ನೇ ಸಾಲಿನ ಮಹಾಸಭೆಯ ನಡವಳಿಕೆಗಳು

ದಿನಾಂಕ : 08/09/2024ರ ಭಾನುವಾರ ಬೆಳಿಗ್ಗೆ 11 ಗಂಟೆಗೆ "ಆರಾಧ್ಯ ಮಹಾಸಭಾ" ಸಭಾಂಗಣದಲ್ಲಿ (ನಂ 2944, ಜಾನ್ಸಿ ಲಕ್ಷ್ಮಿಬಾಯಿ ರಸ್ತೆ. ಚಾಮುಂಡಿಪುರಂ ( ಕೇಂದ್ರೀಯ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಕೇಂದ್ರದ ಎದುರು) ಮೈಸೂರು – 570004,) ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ನಡೆಸಿದ 2023–2024ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳು.

ಹಾಜರಿ:– ಸಭೆಗೆ 290 ಸದಸ್ಯರು ಹಾಜರಾಗಿದ್ದು ಹಾಜರಾತಿಯನ್ನು ಪ್ರತ್ಯೇಕವಾಗಿ ದಾಖಲಿಸಲಾಗಿದೆ.

| ಕ್ರಸಂ | ವಿಷಯ | ತೀರ್ಮಾನ |
|---|---|---|
| 1 | ಪ್ರಾರ್ಥನೆ | ದೇವತಾ ಪ್ರಾರ್ಥನೆಯೊಂದಿಗೆ ಮಹಾಸಭೆಯು ಪ್ರಾರಂಭವಾಯಿತು. |
| 2 | ಸ್ವಾಗತ | ಸಂಘದ ನಿರ್ದೇಶಕರಾದ ಶ್ರೀ ಜಿ.ಶೇಖರಮೂರ್ತಿಯವರು ಸಭೆಯನ್ನು ಉದ್ದೇಶಿಸಿ, ಮಹಾಸಭೆಯನ್ನು ಪ್ರಾರಂಭ ಮಾಡುವ ಮುನ್ನ,2023–24ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ನಡೆಸಿಕೊಡಬೇಕೆಂದು ನಮ್ಮ ಸಂಘದ ಅಧ್ಯಕ್ಷರಾದ ಶ್ರೀ.ಎನ್.ಡಿ.ಸುಂದರ್ ರವರಿಗೆ ,ವೇದಕೆ ಮೇಲೆ ಉಪಸ್ಥಿತರಾಗಿರುವ ಸಂಘದ ಪಾದಾಧಿಕಾರಿಗಳಿಗೆ ಹಾಗೂ ಸಭೆಯಲ್ಲಿ ಭಾಗವಹಿಸಲು ಆಗಮಿಸಿರುವ ಸದಸ್ಯರಿಗೆ ಹೃತ್ಪೂರ್ವಕವಾಗಿ ಸ್ವಾಗತಿಸಿ, ಮಹಾಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿ ರಚನಾತ್ಮಕ ಚರ್ಚೆಗೆ ಅವಕಾಶ ಮಾಡಿಕೊಡುವಂತೆ ಎಲ್ಲರಿಗೂ ಮನವಿ ಮಾಡಿದರು. |
| 3 | ನಿಧನ ಹೊಂದಿದವರಿಗೆ ಸಂತಾಪ ಸೂಚನೆ:– | ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು 2023–2024ನೇ ಸಾಲಿನಲ್ಲಿ ನಿಧನ ಹೊಂದಿರುವ ಸದಸ್ಯರ ಹೆಸರನ್ನು ಸಭೆಯಲ್ಲಿ ಮಂಡಿಸಿ , ಹೆಸರು ತಪ್ಪಿದ್ದಲ್ಲಿ ಈ ಕೂಡಲೇ ಸಭೆಗೆ ತಿಳಿಸಬೇಕೆಂದು ಸೂಚಿಸಿದರು. ಯಾರು ಹೆಸರನ್ನು ಸೂಚಿಸದ ಕಾರಣ ಸಭಾಧ್ಯಕ್ಷರು ಸಂಘದ ಸದಸ್ಯರಾದ ದಿ//.ಜಯರಾಮ, ದಿ//. ಶಂಕರ್, ದಿ// ನಂಜುಂಡೆಗೌಡ, ದಿ// ಬಿ.ಎಸ್.ಶಿವಾನಂದ್, ದಿ//ಅಶೋಕ್, ದಿ//ರಾಮಕೃಷ್ಣ, ದಿ//ದಾಕ್ಷಾಯಣಮ್ಮ, ದಿ//ಸರೋಜ, ದಿ //ಶಾಂತಮೂರ್ತಿ,ದಿ//ಪ್ರಸನ್ನ,ದಿ//ಕೆ.ಎನ್,ಕೃಷ್ಣಮೂರ್ತಿ,ದಿ//ರಾಮಕೃಷಯ್ಯ, ದಿ//ಬಿ.ಬಸವರಾಜು ರವರಿಗೆ ಮತ್ತು ಸಂಘದ ಗಮನಕ್ಕೆ ಬಾರದೆಯಿರುವ ಸದಸ್ಯರ ಹೆಸರು ತಪ್ಪಿದ್ದಲ್ಲಿ ಅವರಿಗೂ ಸಭೆಯಲ್ಲಿ ಒಂದು ನಿಮಿಷ ಮೌನ ಆಚರಿಸಿ ಸಂತಾಪ ಸೂಚಿಸಿದರು. |
| 4 | ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು:– | ವಾರ್ಷಿಕ ಮಹಾಸಭೆಯ ಬಗ್ಗೆ ಸದಸ್ಯರಿಗೆ ಸಂಘವು ನೀಡಲಾದ ಸೂಚನಾ ಪತ್ರವನ್ನು ನಿರ್ದೇಶಕರಾದ ಶ್ರೀ ಎ.ಸುರೇಶ್‌ರವರು ಸಭೆಯಲ್ಲಿ ಓದಿ ಸಭೆಯ ಅನುಮೋದನೆ ಕೋರಿದರು. ಸಭೆಯು ಸರ್ವಾನುಮತದ ಒಪ್ಪಿಗೆ ಮೇರಿಗೆ ಸಂಘದ 2023–24ನೇ ಸಾಲಿನ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ದಾಖಲು ಮಾಡಲಾಯಿತು. |
| 5. | ದಿನಾಂಕ:03/09/2023ರ ಮಹಾಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು:– | ಸಂಘದ ನಿರ್ದೇಶಕರಾದ ಶ್ರೀ.ಎ.ಪ್ರಕಾಶ್ ರವರು ದಿನಾಂಕ:–03/09/2023 ರಂದು ನಡೆದ 2022–2023ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಸಭೆಯಲ್ಲಿ ಓದಿ ಸಭೆಯ ಅನುಮೋದನೆ ಕೋರಿದರು. ಸಭೆಯು ಸರ್ವಾನುಮತದ ಒಪ್ಪಿಗೆ ಮೇರೆಗೆ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ದಾಖಲು ಮಾಡಲಾಯಿತು. |

**6 ಸಂಘದ 2023-24 ನೇ ಸಾಲಿನ ಆಡಳಿತ ವರದಿ**

ಸಂಘದ 2023-24ನೇ ಸಾಲಿನ ಆಡಳಿತ ವರದಿಯನ್ನು ನಿರ್ದೇಶಕರಾದ ಶ್ರೀ.ಮುರಳಿಯವರು ರವರು ಸಭೆಯಲ್ಲಿ, ಮಂಡಿಸಿ ಸಭೆಯ ಅನುಮೋದನೆ ಕೋರಿದರು.
ಸಭೆಯು ಸಂಘದ 2023-24ನೇ ಆಡಳಿತ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿ ಅನುಮೋದಿಸಿತು.

**7 ಸಂಘದ 2023-24ನೇ ಸಾಲಿನ ಆಡಿಟ್ ಆದ ಲೆಕ್ಕ ತಃಖ್ತೆಗಳ ಮಂಡನೆ ಹಾಗೂ ಅಂಗೀಕಾರ**

ಸಂಘದ 2023-24ನೇ ಸಾಲಿನ ಆಡಿಟ್ ಆದ ಜಮಾ-ಖರ್ಚು, ಲಾಭ-ನಷ್ಟ, ಆಸ್ತಿ ಜವಾಬ್ದಾರಿ ಲೆಕ್ಕ ತಃಖ್ತೆಗಳು ಹಾಗೂ ವರದಿಯನ್ನು ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್‌ರವರು ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಕೋರಿದರು.
ಸದಸ್ಯರಾದ ಶ್ರೀ.ನಾಗರಾಜ್ ರವರು ಲೆಕ್ಕತಃಖ್ತೆಗಳ ಆಸ್ತಿ ಜವಾಬ್ದಾರಿ ಲೆಕ್ಕದಲ್ಲಿ

| | | | |
|---|---|---|---|
| 3 | <u>ಹೂಡಿಕೆಗಳು :-</u> | | |
| | ನಿಶ್ಚಿತ ಠೇವಣಿ ಬ್ಯಾಂಕ್ ಆಫ್ ಬರೋಡಾ | 9,510,175.00 | |
| | ಆಪದ್ದನ ನಿಧಿ ಠೇವಣಿಎಂ.ಡಿ.ಸಿ.ಸಿ.ಬ್ಯಾಂಕ್ | 191,905.00 | 9,702,080.00 |

ಎಂದು ನಮೂದಿಸಿದ್ದೀರಿ, ಬ್ಯಾಂಕ್ ಆಫ್ ಬರೋಡಗಿಂತ ಕರ್ನಾಟಕ ಬ್ಯಾಂಕ್‌ನಲ್ಲಿ ಬಡ್ಡಿದರ ಹೆಚ್ಚಾಗಿದೆ, ತಾವು ಬ್ಯಾಂಕ್ ಆಫ್ ಬರೋಡದಲ್ಲಿ ನಿಶ್ಚಿತ ಠೇವಣಿ ಇಡುವ ಬದಲು ಕರ್ನಾಟಕ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ ಇಡುವುದರಿಂದ ಸಂಘಕ್ಕೆ ಒಳಿತು ಎಂದರು.

ಈ ಬಗ್ಗೆ ಸಭಾಧ್ಯಕ್ಷರು ಪ್ರತಿಕ್ರಿಯಿಸುತ್ತಾ, ಸಹಕಾರ ಸಂಘಗಳು ಎಂ.ಡಿ.ಸಿ.ಸಿ.ಬ್ಯಾಂಕ್‌ನಲ್ಲಿ ಮಾತ್ರ ನಿಶ್ಚಿತ ಠೇವಣಿಯನ್ನು ಇಡಬೇಕು ಖಾಸಗಿ ಬ್ಯಾಂಕ್‌ಗಳಲ್ಲಿ ಇಡುವಹಾಗಿಲ್ಲ ಬ್ಯಾಂಕ್ ಆಫ್ ಬರೋಡದಲ್ಲಿ ನಿಶ್ಚಿತ ಠೇವಣಿ ಇಟ್ಟಿರುವುದು ಮೊದಲಿನಿಂದಲೂ 4ನೇ ಹಂತದ ಮತ್ತು 5ನೇ ಹಂತದ ಸದಸ್ಯರು ವ್ಯವಹರಿಸುತ್ತಿರುವ ಬ್ಯಾಂಕ್, ಇದೀಗ ಹೊಸದಾಗಿ 7ನೇ ಹಂತ ಪ್ರಾರುಂಭಿಸುತ್ತಿರುವ ಕಾರಣ ಹೊಸ ಖಾತೆಯನ್ನು ತೆರೆಯಲಾಗಿದೆ. ಈ ವಿಷಯದ ಬಗ್ಗೆ ಮುಂದಿನ ದಿನಗಳಲ್ಲಿ ಕ್ರಮವಿಡಲಾಗುವುದು ಎಂದು ತಿಳಿಸಿದರು.

ಸಂಘದ 2023-24ನೇ ಸಾಲಿನ ಆಡಿಟ್ ಆದ ಲೆಕ್ಕ ತಃಖ್ತೆಗಳನ್ನು ಮತ್ತು ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿ ಅನುಮೋದಿಸಿತು.

**8 ಸಂಘದ 2023-24ನೇ ಸಾಲಿನ ಲಾಭ ವಿಲೇವಾರಿ**

ಸಂಘವು 2023-24ನೇ ಸಾಲಿನಲ್ಲಿ ಗಳಿಸಿರುವ ನಿವ್ವಳ ಲಾಭ ರೂ: 6,73,291.35/- ಗಳನ್ನು ಕೆಳಕಂಡಂತೆ ವಿಲೇವಾರಿ ಮಾಡಲು ಸಭೆಯ ಅನುಮೋದನೆಗಾಗಿ ನಿರ್ದೇಶಕರಾದ ಶ್ರೀ ಎ.ಸುರೇಶ್ ರವರು ಸಭೆಯಲ್ಲಿ ಮಂಡಿಸಿದರು.

| | |
|---|---|
| ಅಪದ್ಧನ ನಿಧಿ, ಶೇಕಡ 25 | ರೂ.1,68,322.35 |
| ಸಹಕಾರ ವಿದ್ಯಾನಿಧಿ, ಶೇಕಡ 2 | ರೂ.10,099.00 |
| ಸದಸ್ಯರ ಷೇರಿನ ಮೇಲೆ ಲಾಭಾಂಶ ಶೇಕಡ 6 | ರೂ.1,13,514.00 |
| ನೌಕರರಿಗೆ ಬೋನಸ್ | ರೂ.24,000.00 |
| ನಿವೇಶನ ನಿರ್ವಹಣಾ ವೆಚ್ಚದ ನಿಧಿ | ರೂ. 3,57,356.00 |

ಸಂಘದ 2023-24ನೇ ಸಾಲಿನ ಲಾಭ ವಿಲೇವಾರಿಗೆ ಸಭೆಯು ತನ್ನ ಅನುಮೋದನೆ ನೀಡಿತು.

| | | |
|---|---|---|
| 9 | ಸಂಘದ 2024–25ನೇ ಸಾಲಿಗೆ ಬಡ್ಜೆಟ್ ಮಂಜೂರಾತಿ | 2024–25ನೇ ಸಾಲಿಗೆ ಅಂದಾಜು ಆಯ–ವ್ಯಯ ಪಟ್ಟಿಯನ್ನು ನಿರ್ದೇಶಕರಾದ ಶ್ರೀ ಎ.ಸುರೇಶ್‌ರವರು ಕೆಳಕಂಡಂತೆ ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಕೋರಿದರು. |

| ಕ್ರಸಂ | ಅಂದಾಜು ಆದಾಯ | ರೂ. | ಅಂದಾಜು ವೆಚ್ಚ | ರೂ. |
|---|---|---|---|---|
| 1. | ಠೇವಣಿ ಮೇಲೆ ಬಡ್ಡಿ | 13,00,000.00 | *ಸಿಬ್ಬಂದಿ ವೆಚ್ಚ | 3,00,000.00 |
| | | | *ಬಾಡಿಗೆ | 1,90,000.00 |
| 2. | ಇತರೆ ಮೂಲಗಳಿಂದ | 4,00,000.00 | *ದೂರವಾಣಿ ವೆಚ್ಚ | 20,000.00 |
| | | | *ವಿದ್ಯುತ್ ವೆಚ್ಚ | 15,000.00 |
| | | | *ಅಂಚೆ ವೆಚ್ಚ | 25000.00 |
| | | | *ಮುದ್ರಣ ಲೇಖನಸಾಮಗ್ರಿ | 25,000.00 |
| | | | *ವಾರ್ಷಿಕ ಮಹಾಸಭೆ ವೆಚ್ಚ | 2,65,000.00 |
| | | | *ನಿವೇಶನದಾರರು ಸಬೆ ವೆಚ್ಚ | 1,00,000.00 |
| | | | *ನ್ಯಾಯವಾದಿಗಳ ಶುಲ್ಕ | 1,00,000.00 |
| | | | *ಪ್ರಯಾಣ ವೆಚ್ಚ | 50,000.00 |
| | | | *ಜಾಹೀರಾತು ವೆಚ್ಚ | 50,000.00 |
| | | | *ಕಚೇರಿ ನಿರ್ವಹಣೆ ವೆಚ್ಚ ಮತ್ತು ಆಡಳಿತಾತ್ಮಕ ವೆಚ್ಚ | 2,50,000.00 |
| | | | *ಅಂದಾಜು ಲಾಭ | 1,10,000.00 |
| | | | *ಚುನಾವಣಾ ವೆಚ್ಚ | 2,00,000.00 |
| | ಜುಮ್ಲಾ ರೂ. | 17,00,000.00 | ಜುಮ್ಲಾ ರೂ. | 17,00,000.00 |

ಸದಸ್ಯರಾದ ಶ್ರೀ ದತ್ತಾತ್ರೇಯ ಹೆಗಡೆಯವರು ಸಂಘದ 2024–25ನೇ ಸಾಲಿಗೆ ಬಡ್ಜೆಟ್ ಮಂಜೂರಾತಿಯಲ್ಲಿ ಅಂದಾಜು ಆದಾಯದಲ್ಲಿ ಕ್ರಸಂ:02ರಲ್ಲಿ ಇತರೆ ಮೂಲಗಳಿಂದ:– 4,00,000/– ಎಂದು ನಮೂದಿಸಿದ್ದೀರಿ ಆ ಹಣ ಯಾವುದು ಎಂದು ಪ್ರಶ್ನಿಸಿದರು .

ಈ ಬಗ್ಗೆ ಸಭಾಧ್ಯಕ್ಷರು ಪ್ರತಿಕ್ರಿಯಿಸುತ್ತಾ ,ಇತರೆ ಮೂಲಗಳಿಂದ:–4,00,000/–ಎಂದರೆ ನಿರಾಕ್ಷೇಪಣಾ ಪತ್ರಗಳು ಮತ್ತು ಬೆಟರೆ ಮೆಂಟ್ ಲಿವಿಗಳು,ಪ್ರಸ್ತುತ ಸಾಲಿನಲ್ಲಿ ಇಂತಿಷ್ಟೇ ಆದಾಯಗಳು ಬರಬೇಕೆಂದೇನಿಲ್ಲ,ಇದು ಅಂದಾಜು ಆದಾಯ ಅಷ್ಟೇ ಎಂದು ತಿಳಿಸಿದರು.

ಸದಸ್ಯರಾದ ಶ್ರೀ.ಚಂದ್ರಪ್ಪರವರು,ಶ್ರೀ.ರಾಚಯ್ಯನವರು ಮತ್ತು ಶ್ರೀ.ಮೋಹನ್ ಕುಮಾರ್ ರವರು ಅಧ್ಯಕ್ಷರನ್ನು ಉದ್ದೇಶಿಸಿ, ತಾವು ಚುನಾವಣೆ ವೆಚ್ಚವೆಂದು ರೂ:–2,00,000/–ಗಳನ್ನು ಅಂದಾಜು ಪಟ್ಟಿಯಲ್ಲಿ ನಿಗದಿಪಡಿಸಿದ್ದೀರಿ, ಅದರ ಬದಲು ಚುನಾವಣೆ ವೆಚ್ಚವನ್ನು ಕಡಿತಗೊಳಿಸಿ ಸದಸ್ಯರ ಷೇರಿನ ಮೇಲೆ ಲಾಭಾಂಶ ಶೇಕಡ 6 ಬದಲು ಶೇಕಡ 10ಕ್ಕೆ ನಿಗದಿಪಡಿಸಿ ಎಂದರು, ಸದಸ್ಯರಾದ ಶ್ರೀ.ಸಿ.ಎಸ್.ಶಿವಕುಮಾರ್ ಸ್ವಾಮಿರವರು ಸದಸ್ಯರ ಷೇರಿನ ಮೇಲೆ ಲಾಭಾಂಶವನ್ನು ಸದಸ್ಯರ ಬ್ಯಾಂಕ್ ಖಾತೆಗಳಿಗೆ ವರ್ಗಾ ಯಿಸಬಹು ,ಮುಂದಿನ ಸಾಲುಗಳಲ್ಲಿ ಏಕೆ ಈ ಸೌಲಭ್ಯವನ್ನು ಬಳಸಿಕೊಳ್ಳಬಾರದು ಎಂದರು. ಹಾಗೂ ಸದಸ್ಯರಾದ ಶ್ರೀ.ಮೋಹನ್ ಕುಮಾರ್ ರವರು ನಿಮ್ಮ ಸಂಘದ ಆಡಳಿತ ಮಂಡಳಿಯು ಬಹಳ ನಿಷ್ಠೆ ಮತ್ತು ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸುತ್ತಾ ಬಂದಿರುತ್ತದೆ, ಪ್ರತಿಸಾಲಿನಂತೆ ಈ ಸಾಲಿನಲ್ಲಿಯೂ ಚುನಾವಣೆ ಅವಿರೋಧವಾಗಿ ಆಯ್ಕೆ ನಡೆಯಲಿ ,ಸಂಘದ ಹಿತ ದೃಷ್ಟಿಯಿಂದ ಮುಂಬರುವ ಸಾಲಿನಲ್ಲಿ ಹೊಸಬರಿಗೂ ಹಾಗೂ ಕಿರಿಯರಿಗೂ ಅವಕಾಶ ನೀಡಿ ಎಂದು ಸಲಹೆ ನೀಡಿದರು.

<table>
<tr><td></td><td></td><td>ಈ ಬಗ್ಗೆ ಸಭಾಧ್ಯಕ್ಷರು ಪ್ರತಿಕ್ರಿಯಿಸುತ್ತಾ , ಚುನಾವಣೆ ವೆಚ್ಚವನ್ನು ಕಡಿತಗೊಳಿಸಿ ಸದಸ್ಯರ ಷೇರಿನ ಮೇಲೆ ಲಾಭಾಂಶವನ್ನು ಹೆಚ್ಚಾಗಿ ನಿಗದಿಪಡಿಸಲು ಸಾಧ್ಯವಿಲ್ಲ,ಏಕೆಂದರೆ ಸಂಘದಲ್ಲಿ ಚುನಾವಣೆ ನಡೆದರೆ ಮಾತ್ರ ಆ ಹಣವನ್ನು ಬಳಸಲು ಸಾಧ್ಯ, ಅವಿರೋದವಾಗಿ ಆಯ್ಕೆಗೊಂಡರೆ ಅಗತ್ಯ ಇದ್ದಷ್ಟು ಬಳಸಿಕೊಳ್ಳಲಾಗುವುದು ಇದು ಅಂದಾಜು ಮೊತ್ತ ಮಾತ್ರ ಮತ್ತು ಈ ಬಾರಿ ಸಂಘವು ಲಾಭದಲ್ಲಿದೆ ಮುಂಬರುವ ಸಾಲುಗಳಲ್ಲಿ ಸಂಘವು ಲಾಭದಲಿರುತ್ತದೆ ಎಂದು ಹೇಳಲಾಗುವುದಿಲ್ಲ ಹಾಗೂ ಕಚೇರಿಯ ನಿರ್ವಹಣೆಯನ್ನು ಕೂಡ ಬರಿಸಬೇಕಾಗಿರುತ್ತದೆ, ಮತ್ತು ಸದಸ್ಯರ ಷೇರಿನ ಮೇಲೆ ಲಾಭಾಂಶವನ್ನು ಸದಸ್ಯರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲು ಲಾಭಾಂಶವು ಬಹಳ ಕಡಿಮೆ ಮೊತ್ತದಲ್ಲಿರುತ್ತದೆ ಪ್ರತಿ ವರ್ಗಾವಣೆಗೂ 5 ರಿಂದ 10 ರೂಪಾಯಿಗಳು ವೆಚ್ಚವಾಗುತ್ತದೆ ಹಾಗೂ ಪ್ರತಿ ಸದಸ್ಯರು ಷೇರ್ ಲೆಡ್ಜರ್‌ನಲ್ಲಿ ಸಹಿ ಮಾಡಬೇಕಾಗಿರುವುದರಿಂದ ಬ್ಯಾಂಕ್ ವರ್ಗಾವಣೆ ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು. ಸಭೆಯು ಮೇಲ್ಕಂಡ 2024-25ನೇ ಸಾಲಿನ ಅಂದಾಜು ಆಯ-ವ್ಯಯ ಪಟ್ಟಿಯನ್ನು ಸರ್ವಾನುಮತದಿಂದ ಮಂಜೂರು ಮಾಡಿತು.</td></tr>
<tr><td>10</td><td>ಸಂಘದ 2024-25ನೇ ಸಾಲಿನ ಲೆಕ್ಕ ಪತ್ರಗಳನ್ನು ಪರಿಶೋಧಿಸಲು ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಬಗ್ಗೆ</td><td>2024-25ನೇ ಸಾಲಿನ ಲೆಕ್ಕ ಪತ್ರಗಳನ್ನು ,ಲೆಕ್ಕಪರಿಶೋಧನೆ ಮಾಡಲು "ಸಂಗಮೇಶ ಅಸೋಸಿಯೇಟ್ ಸ್# ನಂ09, 2ನೇ ಮಹಡಿ ರಾಧ ಬಿಲ್ಡಿಂಗ್ ಮಲ್ಲೇಶ್ವರಂ ಸರ್ಕಲ್,ಬೆಂಗಳೂರು-560003".ರವರನ್ನು ನೇಮಕ ಮಾಡಿಕೊಳ್ಳಲು ನಿರ್ದೇಶಕರಾದ ಶ್ರೀ ಎ.ಸುರೇಶ್‌ರವರು ಸಭೆಯ ಅನುಮೋದನೆ ಕೋರಿದರು ಸಭೆಯು ಸರ್ವಾನುಮತದಿಂದ ತನ್ನ ಅನುಮೋದನೆ ನೀಡಿತು.</td></tr>
<tr><td>11</td><td>1).ಸಂಘದ ಲೆಕ್ಕ ತಃಖ್ತೆಗಳ ಆಸ್ತಿ ಜವಾಬ್ದಾರಿಗಳಲ್ಲಿ ಕ್ರ.ಸಂ:10ರ ,1ನೇ ಮತ್ತು 2ನೇ ಹಂತದ "ಹಿಂದಿನಂತೆ ಬರತಕ್ಕ ಬಾಕಿಗಳಲ್ಲಿ"ದಿ// ಕುನ್ನಯ್ಯರವರಿಂದ ಅಭಿವೃದ್ದಿ ಮುಂಗಡ ಮತ್ತು ಕಾಯ್ದೆ ಕಲಂ 64 ರನ್ವಯ ವಸೂಲಾತಿ ಲೆಕ್ಕ ತಃಖ್ತೆಯಿಂದ ಕೈಬಿಡುವ ಬಗ್ಗೆ.</td><td>ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು ಸಂಘದ ಲೆಕ್ಕ ತಃಖ್ತೆಗಳ ಆಸ್ತಿ ಜವಾಬ್ದಾರಿಗಳಲ್ಲಿ ಕ್ರ.ಸಂ:10ರ ,1ನೇ ಮತ್ತು 2ನೇ ಹಂತದ "ಹಿಂದಿನಂತೆ ಬರತಕ್ಕ ಬಾಕಿಗಳಲ್ಲಿ"ದಿ// ಕುನ್ನಯ್ಯರವರಿಂದ ಅಭಿವೃದ್ದಿ ಮುಂಗಡ ಮತ್ತು ಕಾಯ್ದೆ ಕಲಂ 64 ರನ್ವಯ ವಸೂಲಾತಿ ಲೆಕ್ಕ ತಃಖ್ತೆಯಿಂದ ಕೈಬಿಡುವ ಬಗ್ಗೆ. ಕೆಳಕಂಡಂತೆ ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಕೋರಿದರು.
<table>
<tr><td>10</td><td><u>ಹಿಂದಿನಂತೆ ಬರತಕ್ಕ ಬಾಕಿಗಳು :-</u></td><td></td><td></td></tr>
<tr><td></td><td>ಕುನ್ನಯ್ಯರವರಿಂದ ಅಭಿವೃದ್ದಿ ಮುಂಗಡ</td><td>943,771.18</td><td></td></tr>
<tr><td>10</td><td><u>ಕಾಯ್ದೆ ಕಲಂ 64ರನ್ವಯ ವಸೂಲಾತಿ :-</u></td><td></td><td></td></tr>
<tr><td></td><td>ಅಧಿಬಾರ ಅರ್ಜಿ ಸಂ.5/1991-92</td><td>1,108.00</td><td></td></tr>
<tr><td></td><td>ಅಧಿಬಾರ ಅರ್ಜಿ ಸಂ.7/1991-92</td><td>10,811.00</td><td></td></tr>
<tr><td></td><td>ಅಧಿಬಾರ ಅರ್ಜಿ ಸಂ.12/1991-92</td><td>10,400.10</td><td></td></tr>
<tr><td></td><td>ಅಧಿಬಾರ ಅರ್ಜಿ ಸಂ.12/1991-92 ರ ಬಡ್ಡಿ</td><td>11,188.60</td><td></td></tr>
<tr><td></td><td>ಅಧಿಬಾರ ಅರ್ಜಿ ಸಂ.13/1991-92</td><td>7,561.00</td><td></td></tr>
<tr><td></td><td>ಅಧಿಬಾರ ಅರ್ಜಿ ಸಂ.13/1991-92 ರ ಬಡ್ಡಿ</td><td>2,541.65</td><td>43,610.35</td></tr>
</table>
ಕ್ರ.ಸಂ:10ರ ,1ನೇ ಮತ್ತು 2ನೇ ಹಂತದ "ಹಿಂದಿನಂತೆ ಬರತಕ್ಕ ಬಾಕಿಗಳಲ್ಲಿ" ದಿ// ಕುನ್ನಯ್ಯರವರಿಂದ ಅಭಿವೃದ್ದಿ ಮುಂಗಡ ಮತ್ತು ಕಾಯ್ದೆ ಕಲಂ 64 ರನ್ವಯ ವಸೂಲಾತಿ ಲೆಕ್ಕ ತಃಖ್ತೆಯಿಂದ ಕೈಬಿಡುವ ಬಗ್ಗೆ ಸಭೆಯು ಸರ್ವಾನುಮತದಿಂದ ತನ್ನ ಅನುಮೋದನೆ ನೀಡಿತು.</td></tr>
</table>

| | | |
|---|---|---|
| 12 | ಸಂಘಕ್ಕೆ ಹೊಸದಾಗಿ ಸದಸ್ಯತ್ವ ಹೊಂದುವ ಅರ್ಜಿದಾರರಿಗೆ ಮರಣನಿಧಿ ವಂತಿಕೆಯ ಮೊತ್ತವನ್ನು 500 ರೂ/-ಗಳಿಂದ 1000 ರೂಗಳಿಗೆ ನಿಗದಿಪಡಿಸುವ ಬಗ್ಗೆ. | ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು ಸಂಘಕ್ಕೆ ಹೊಸದಾಗಿ ಸದಸ್ಯತ್ವ ಹೊಂದುವ ಅರ್ಜಿದಾರರಿಗೆ ಮರಣನಿಧಿ ವಂತಿಕೆಯ ಮೊತ್ತವನ್ನು 500 ರೂ/-ಗಳಿಂದ 1000 ರೂಗಳಿಗೆ ನಿಗದಿಪಡಿಸುವ ಬಗ್ಗೆ ಮಹಾಸಭೆಯ ಅನುಮೋದನೆ ಕೋರುವ ಬಗ್ಗೆ. ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಕೋರಿದರು.<br>ಹೊಸದಾಗಿ ಸದಸ್ಯತ್ವ ಹೊಂದುವ ಅರ್ಜಿದಾರರಿಗೆ ಮರಣನಿಧಿ ವಂತಿಕೆಯ ಮೊತ್ತವನ್ನು 500 ರೂ/-ಗಳಿಂದ 1000 ರೂಗಳಿಗೆ ನಿಗದಿಪಡಿಸುವ ಬಗ್ಗೆ ಮಹಾಸಭೆಯ ಮಹಾಸಭೆಯ ಅನುಮೋದನೆ ಕೋರುವ ಬಗ್ಗೆ. ಸಭೆಯು ತನ್ನ ಅನುಮೋದನೆ ನೀಡಿತು. |
| 13 | ಇತರೆ ವಿಷಯಗಳಿದ್ದಲ್ಲಿ ಅಧ್ಯಕ್ಷರ ಅನುಮತಿ ಮೇರೆಗೆ | (ಅ). ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು ಸಭೆಗೆ 4ನೇ ಮತ್ತು 5ನೇ ಹಂತಕ್ಕೆ ಸಂಬಂದಿಸಿದಂತೆ ಮಾಹಿತಿಯನ್ನು ವಿವರಿಸುತ್ತೇನೆ ನಂತರ ಸದಸ್ಯರಿಗೆ ಈ ಬಗ್ಗೆ ಯಾವುದೇ ಪ್ರಶ್ನೆಗಳಿದ್ದಲ್ಲಿ ಕೇಳಿ ಉತ್ತರ ಪಡೆಯಬಹುದು ಎಂದು ತಿಳಿಸಿ ಕೆಳಕಂಡ ಮಾಹಿತಿಯನ್ನು ನೀಡಿದರು.<br>➢ <u>ಯೋಜಿತ 4ನೇ ಹಂತ:-</u><br>ಸಂಘವು ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವಾಜಮಂಗಲ ಗ್ರಾಮದ ಸರ್ವೆ ನಂಬರ್ 191, 193/5, 184, 186, 188, 190, 195, 3/2, 191/2 ,191/8 ರಲ್ಲಿ ಒಟ್ಟು 28 ಎಕರೆ 30.5 ಗುಂಟೆ ಹಾಗೂ ಸರ್ವೆ ನಂ 3/2,191/2,191/8 ರ 3 ಎಕರೆ 39 ಗುಂಟೆ ಜಮೀನುಗಳಲ್ಲಿ ಅಭಿವೃದ್ದಿಪಡಿಸಿರುವ ವಸತಿ ಬಡಾವಣೆ ನಿವೇಶನಗಳನ್ನು ಸದಸ್ಯರುಗಳಿಗೆ ಮಂಜೂರಾದ ನಕ್ಷೆಯಂತೆ ವಿವಿಧ ಅಳತೆಯ ಒಟ್ಟು 430 ನಿವೇಶನಗಳನ್ನು ಅಭಿವೃದ್ಧಿ ಪಡಿಸಿ, ಇವುಗಳನ್ನು ಸದಸ್ಯರಿಗೆ ಜೇಷ್ಠತೆ ಆಧಾರದ ಮೇಲೆ ಹಂಚಿಕೆ ಮಾಡಲಾಗಿದೆ.<br>ಬಡಾವಣೆಯಲ್ಲಿ ಲಭ್ಯವಿರುವ ಒಟ್ಟು 430 ನಿವೇಶನಗಳ ಪೈಕಿ 430 ನಿವೇಶನಗಳು ಪ್ರಾಧಿಕಾರದಿಂದ ಶೇಕಡ 100% ರಷ್ಟು ಬಿಡುಗಡೆಗೊಂಡಿದ್ದು, ನಿವೇಶನಗಳ ನೋಂದಣಿ ಪ್ರಕ್ರಿಯೆ ಮುಕ್ತಾಯ ಹಂತದಲ್ಲಿರುತ್ತದೆ.<br>➢ <u>ಯೋಜಿತ 5ನೇ ಹಂತ:</u><br>ಉದ್ದೇಶಿಸಲಾಗಿರುವ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ವಾಜಮಂಗಲ ಗ್ರಾಮದಲ್ಲಿ ಸರ್ವೆ ನಂ: 34/1ಎ, 34/1ಬಿ, 34/2, 34/3, 34/4, 34/4ಎ, 34/5ಬಿ, 34/8ಎ, 34/9, 192/2, 192/3, 193/3, 193/4, 193/5, 193/6, 194/1ಬಿ, 194/1ಎ2, 213/3, 194/1ಎ1, 200/1, 200/2, 200/3, 200/6, 206/1ಎ1, 206/3, 213/1, 214/3, 216, 217/1, 217/2, 217/3ರಲ್ಲಿ ಸುಮಾರು 49 ಎಕರೆ 39 ಗುಂಟೆ ಜಮೀನಿನ ಪೈಕಿ 39ಎಕರೆ 35.5ಗುಂಟೆ ಜಮೀನಿನನ್ನು ನಕ್ಷೆ ಅನುಮೋದನೆಗೊಂಡಿದ್ದು ನಕ್ಷೆ ಬಿಡುಗಡೆ ಆದೇಶ ಸಂಖ್ಯೆ:-ಮೈ. ನ. ಪ್ರಾ: ನ ಯೋ ಶಾ: ವಿನ್ಯಾಸ: 55: 2021-22, ದಿನಾಂಕ:7-8-2021 ರಂದು ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ರವರಿಂದ ವಸತಿ ವಿನ್ಯಾಸ ನಕ್ಷೆಯ ಅನುಮತಿ ಆದೇಶ ಬಿಡುಗಡೆಯಾಗಿರುತ್ತದೆ.<br>ಬಡಾವಣೆಯಲ್ಲಿ ಸಿವಿಲ್ ಕಾಮಗಾರಿಗಳು ,ಒಳಚರಂಡಿ ,ನೀರು,ಉದ್ಯಾನವನ, ಸಿ.ಎ.ನಿವೇಶನ, ರಸ್ತೆ ,ವಿದ್ಯುತ್ ಈ ಕಾಮಗಾರಿಗಳು ಮುಕ್ತಾಯ ಹಂತದಲ್ಲಿರುತ್ತದೆ.ಈ ಎಲ್ಲಾ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು ಪ್ರಾಧಿಕಾರಕ್ಕೆ ಸಲ್ಲಿಸಲಾಗಿದೆ. ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರದಿಂದ ಸಿ.ಡಿ. ಬಿಡುಗಡೆ ಕೆಲಸ ಮಾತ್ರ ಬಾಕಿ ಇರುತ್ತದೆ ನಂತರ ಸದಸ್ಯರಿಗೆ ನೋಂದಣಿ ಮಾಡಿಕೊಡಲು ಕ್ರಮವಿಡಲಾಗುವುದು.<br>ವಾಜಮಂಗಲ ಗ್ರಾಮದ ಸರ್ವೆ ನಂಬರ್ 139/1, 141/3,142/3, 183/4,183/5,183/6,183/7,183/9 & 194/3 ರಲ್ಲಿ ಒಟ್ಟು 8ಎಕರೆ 12.5 ಗುಂಟೆ ಟಟಟಜಮೀನುಗಳು ಭೂಪರಿವರ್ತನೆಗೊಂಡಿದ್ದು ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರದಿಂದ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಗೊಂಡಿರುತ್ತದೆ.ಬಡಾವಣೆಯಲ್ಲಿ ಸಿವಿಲ್ ಕಾಮಗಾರಿಗಳು ನಡೆಯುತ್ತಿದೆ, ಕಾಮಗಾರಿಗಳು ಪೂರ್ಣಗೊಂಡ ಮೇಲೆ ಶೀಘ್ರದಲ್ಲೇ ಬಾಕಿ ಉಳಿದ ಸದಸ್ಯರಿಗೆ ಅನುಮೋದನೆಗೊಂಡ ನಕ್ಷೆಯಲ್ಲಿ ಲಭ್ಯವಿರುವ ಅಳತೆಗಳಿಗೆ ಅನುಗುಣವಾಗಿ ನಿವೇಶವಗಳನ್ನು |

| | | |
|---|---|---|
| | | ಮುಂಬರುವ ದಿನಗಳಲ್ಲಿ ಹಂಚಿಕ್ಕೆ ಮಾಡಲಾಗುವುದು ಎಂದು ತಿಳಿಸಿದರು.<br><br>ವಿಶೇಷ ಸೂಚನೆ ಏನೆಂದರೆ ಸದಸ್ಯರ ಹಿತದೃಷ್ಟಿಯಿಂದಾಗಿ ಬಡಾವಣೆಯಲ್ಲಿ ಬೌಂಡರಿ ನಿವೇಶನಗಳಿಗೆ ತಡೆಗೋಡೆ ನಿರ್ಮಿಸಲು ಸಂಘವು ತೀರ್ಮಾನಿಸಿದೆ, ಬೌಂಡರಿ ನಿವೇಶನಗಳನ್ನು ಹೊಂದಿರು ಸದಸ್ಯರು ಅದಕ್ಕೆ ತಗಲುವ ವೆಚ್ಚವನ್ನು ಬರಿಸಬೇಕಾಗುತ್ತದೆ. ಮತ್ತು ಎಲ್ಲಾ ಸದಸ್ಯರು ಕಡ್ಡಾಯವಾಗಿ ಪ್ರಮಾಣ ಪತ್ರವನ್ನು ಅಂದರೆ ಅಫಿಡವಿಟ್‌ನ್ನು ಸಂಘಕ್ಕೆ ನೀಡತಕ್ಕದ್ದು ತಪ್ಪಿದಲ್ಲಿ ನಿವೇಶನ ನೊಂದಣಿ ಪ್ರಕ್ರಿಯೆಯನ್ನು ತಡೆಹಿಡಿಯಲಾಗುವುದು ಎಂದು ತಿಳಿಸಿದರು.<br><br>3ನೇ ಹಂತದ ಸದಸ್ಯರಾದ ಶ್ರೀಮತಿ.ಸಾವಿತ್ರಿ ಲಕ್ಷ್ಮಿಕಾಂತರಾಜು ರವರು ನಮ್ಮ ಬಡಾವಣೆಯಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿರುವ ಕಾರಣ ದಯಮಾಡಿ ಸಂಘವು ನೀರಿನ ಸಮಸ್ಯೆಯನ್ನು ನಿವಾರಿಸಿ ಕೊಡಬೇಕಾಗಿ ಕೋರಿದರು.<br><br>ಈ ಬಗ್ಗೆ ಸಭಾಧ್ಯಕ್ಷರು ಪ್ರತಿಕ್ರಿಯಿಸುತ್ತಾ ಹಿಂದಿನ ವಾರ್ಷಿಕ ಮಹಾಸಭೆಯಲ್ಲಿ 3ನೇ ಹಂತದಿಂದ ಬರುವ ಆದಾಯಗಳಲ್ಲಿ ಮಾತ್ರ 3ನೇ ಹಂತದ ಖರ್ಚುಗಳನ್ನು ಭರಿಸಬೇಕು ಎಂದು ಸಭೆಯು ತೀರ್ಮಾನಿಸಿರುವುದರಿಂದ, ಸಂಘವು ಯಾವುದೇ ನಿರ್ವಹಣೆ ಮಾಡಲಾಗುವುದಿಲ್ಲವೆಂದು ತೀರ್ಮಾನಿಸಿದರು ಈ ವರ್ಷವೂ ಮಾನವೀಯ ದೃಷ್ಟಿಯಿಂದ 90,000/–ಹೆಚ್ಚುವರಿ ಮೊತ್ತವನ್ನು ಸಂಘವೇ ಖರ್ಚು ಮಾಡಿರುತ್ತದೆ. ಎಂದು ತಿಳಿಸಿದರು<br><br>4ನೇ ಹಂತದ ಸದಸ್ಯರಾದ ಶ್ರೀನಾಗರಾಜ್ ರವರು ಮತ್ತು ಶ್ರೀಮತಿ ಗೀತಾ ಗೋಸ್ಲೆ ರವರು ತಮ್ಮ ನಿವೇಶನಗಳಲ್ಲಿ ಅಳತೆ ವ್ಯತ್ಯಾಸವಾಗಿದ್ದು,ಅಳತೆಕಲ್ಲುಗಳು ಕಾಣದಂತಾಗಿದೆ ದಯಮಾಡಿ ನಿವೇಶನ ಅಳತೆ ಮಾಡಿಸಿ ಕೊಡಿ ಮತ್ತು ನಮ್ಮ ಬೌಂಡರಿ ನಿವೇಶನಗಳಿಗೂ ತಡೆಗೋಡೆ ನಿರ್ಮಿಸಿ ಕೊಡಿ ಎಂದರು.<br><br>ಸದಸ್ಯರಾದ ಶ್ರೀ.ಪುಟ್ಟಯ್ಯ, ಶ್ರೀ.ಹನುಮಂತರಾಯಪ್ಪನವರು ನಾವು ನಿವೇಶನಕ್ಕೆ ಬೇಕಾದ ಹಣವನ್ನು ಪಾವತಿಸಿ ನಿವೇಶನಕಾಗಿ ಕಾಯುತ್ತಿದ್ದೇವೆ ಆದರೆ ನೀವು 4ನೇ ಹಂತದಲ್ಲಿ ಹಣವನ್ನು ಪಾವತಿಸಿದ ಎಲ್ಲಾ ಸದಸ್ಯರಿಗು ನಿವೇಶನವನ್ನು ಹಂಚಿಕೆಮಾಡಲಾಗಿದೆ ಎಂದು ತಿಳಿಸಿದ್ದೀರಿ,ಅದು ಹೇಗೆ ಸಾಧ್ಯ ? ಎಂದು ಪ್ರಶ್ನಿಸಿದರು.<br><br>ಈ ಬಗ್ಗೆ ಸಭಾಧ್ಯಕ್ಷರು ಪ್ರತಿಕ್ರಿಯಿಸುತ್ತಾ ನಿವೇಶನಕ್ಕೆ ಹಣ ಪಾವತಿಸಿರುವ 4ನೇ ಮತ್ತು 5ನೇ ಸದಸ್ಯರಿಗೆ ಸಂಘವು ದಿನಾಂಕ ನಿಗದಿಪಡಿಸಿ ನಿವೇಶನಗಳನ್ನು ಸದಸ್ಯರ ಜೇಷ್ಠತೆಗೆ ಅನುಗುಣವಾಗಿ ಮತ್ತು ಅನುಮೋದನೆಗೊಂಡ ನಕ್ಷೆಯಲ್ಲಿ ಲಭ್ಯವಿರುವ ಅಳತೆಗಳಿಗೆ ಅನುಗುಣವಾಗಿ ಹಂಚಿಕೆಮಾಡಲಾಗಿದೆ .ನಿವೇಶನ ಹಂಚಿಕೆ ಸಮಾರಂಭಕ್ಕೆ ಬಾರದಿರುವ ಸದಸದ್ಯರಿಗೆ ಸಂಘವೇ ಅವರು ಜೇಷ್ಠತೆ ಮತ್ತು ಲಭ್ಯವಿರುವ ನಿವೇಶನದ ಅಳತೆಗೆ ಅನುಗುಣವಾಗಿ ಹಂಚಿಕೆ ಮಾಡಲಾಗಿದೆ, ತಾವು ಸಂಘಕ್ಕೆ ಭೇಟಿ ನೀಡಿ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಬಹುದು ಮತ್ತು ಸದಸ್ಯರು ನೋಂದಣಿಯಾದ ನಂತರ ತಮ್ಮ ನಿವೇಶನಗಳಿಗೆ ತಡೆಗೋಡೆ ನಿರ್ಮಿಸಿಕೊಳ್ಳತಕ್ಕದ್ದು.ಸಂಘದಿಂದಲೇ ನಿರ್ಮಿಸಿ ಕೊಡಬೇಕೆಂದರೆ ಸಂಘಕ್ಕೆ ಮನವಿ ಸಲ್ಲಿಸಿ ನಿಗದಿಯಾದ ಹಣವನ್ನು ಪಾವತಿಸಿದರೆ ಸಂಘವು ತಡೆಗೋಡೆಯನ್ನು ನಿರ್ಮಿಸಿಕೊಡಲಾಗುವುದು ಎಂದು ತಿಳಿಸಿದರು.<br><br>ಸದಸ್ಯರಾದ ಶ್ರೀ.ದತ್ತಾತ್ರೇಯ ಹೆಗಡೆ , ಶ್ರೀ. ಉತ್ತಪ್ಪ, ಶ್ರೀ. ವೆಂಕಟೇಶ್, ಶ್ರೀಮತಿ. ಭಾಗ್ಯ ರವರು ನಾವು ಸಂಘಕ್ಕೆ ಪೂರ್ಣ ನಿವೇಶನ ಮುಂಗಡವನ್ನು ಪಾವತಿಸಿದ್ದೇವೆ, ನಿವೇಶನ ಮಂಜೂರಾತಿ ಮಾಡಲು ಇನ್ನೆಷ್ಟು ದಿನಗಳು ಬೇಕಾಗುತ್ತದೆ? ಮತ್ತು ಜೇಷ್ಠತಾ ಪಟ್ಟಿಯನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ಎಂದು ಪ್ರಶ್ನಿಸಿದರು. |

| | | |
|---|---|---|
| | | ಸಭಾಧ್ಯಕ್ಷರು ಪ್ರತಿಕ್ರಿಯಿಸುತ್ತಾ 8ಎಕರೆ 12.5 ಗುಂಟೆ ಜಮೀನುಗಳು ಭೂಪರಿವರ್ತನೆಗೊಂಡಿದ್ದು ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರದಿಂದ ವಸತಿ ವಿನ್ಯಾಸ ನಕ್ಷೆ ಅನುಮೋದನೆಗೊಂಡಿರುತ್ತದೆ. ಅಪೂರ್ಣ ನಿವೇಶನ ಮುಂಗಡವನ್ನು ಪಾವತಿಸಿರುವ ಸದಸದ್ಯರಿಗೆ ಅನುಮೋದನೆಗೊಂಡ ನಕ್ಷೆಯಲ್ಲಿ ಲಭ್ಯವಿರುವ ಅಳತೆಗಳಿಗೆ ಅನುಗುಣವಾಗಿ ಶೀಘ್ರದಲ್ಲೇ ಹಂಚಿಕೆಮಾಡಲಾಗುವುದು, ಜೇಷ್ಠತಾ ಪಟ್ಟಿಯನ್ನು ನಿವೇಶನ ಮಂಜೂರಾತಿಗೂ ಮುನ್ನ ಸಂಘದ ವೆಬ್‌ಸೈಟ್‌ನಲ್ಲಿ ಮತ್ತು ಸಂಘದ ಸೂಚನ ಫಲಕದಲ್ಲಿ ಪ್ರಕಟಿಸಲಾಗುವುದು ನಿವೇಶನ ಮಂಜೂರಾತಿ ಎಂದು ತಿಳಿಸಿದರು.<br><br>3ನೇ ಹಂತದ ಸದಸ್ಯರಾದ ಶ್ರೀಮತಿ.ಸಾವಿತ್ರಿ ಲಕ್ಷ್ಮಿಕಾಂತರಾಜು ರವರು ನಮ್ಮ ಬಡಾವಣೆಯಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿರುವ ಕಾರಣ ದಯಮಾಡಿ ಸಂಘವು ನೀರಿನ ಸಮಸ್ಯೆಯನ್ನು ನಿವಾರಿಸಿ ಕೊಡಬೇಕಾಗಿ ಕೋರಿದರು.<br><br>ಈ ಬಗ್ಗೆ ಸಭಾಧ್ಯಕ್ಷರು ಪ್ರತಿಕ್ರಿಯಿಸುತ್ತಾ ಹಿಂದಿನ ವಾರ್ಷಿಕ ಮಹಾಸಭೆಯಲ್ಲಿ 3ನೇ ಹಂತದಿಂದ ಬರುವ ಆದಾಯಗಳಲ್ಲಿ ಮಾತ್ರ 3ನೇ ಹಂತದ ಖರ್ಚುಗಳನ್ನು ಭರಿಸಬೇಕು ಎಂದು ಸಭೆಯು ತೀರ್ಮಾನಿಸಿರುವುದರಿಂದ, ಸಂಘವು ಯಾವುದೇ ನಿರ್ವಹಣೆ ಮಾಡಲಾಗುವುದಿಲ್ಲವೆಂದು ತೀರ್ಮಾನಿಸಿದರು ಈ ವರ್ಷವೂ ಮಾನವೀಯ ದೃಷ್ಟಿಯಿಂದ 90,000/-ಹೆಚ್ಚುವರಿ ಮೊತ್ತವನ್ನು ಸಂಘವೇ ಖರ್ಚು ಮಾಡಿರುತ್ತದೆ. ಎಂದು ತಿಳಿಸಿದರು |
| 14 | ವಂದನಾರ್ಪಣೆ | ಸಂಘದ ಆಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರು ಸಭೆಯು ಯಶಸ್ವಿಯಾಗಿ ನಡೆಯಲು ಸಭೆಗೆ ಹಾಜರಾಗಿ ಸಹಕರಿಸಿದ ಸದಸ್ಯರುಗಳಿಗೆ ಹಾಗೂ ನಮ್ಮ ಸಂಘದ ಜೊತೆಯಲ್ಲಿ ಹಲವು ವರ್ಷಗಳಿಂದ ವಸತಿ ನಿವೇಶನಗಳನ್ನು ನಿರ್ಮಿಸಿ ಸದಸ್ಯರಿಗೆ ಹಂಚಿಕೆ ಮಾಡಲು ಸಹಕರಿಸಿರುವ ಗುತ್ತಿಗೆದಾರರಾದ ಮೇ॥ ಸ್ಕಿಲ್‌ಟೆಕ್ ಗುತ್ತಿಗೆದಾರರಿಗೆ ಮತ್ತು ಗ್ರಾವಿಟಿ 9 ಗುತ್ತಿದಾರರಿಗೆ ಹಾಗೂ ಪೊಲೀಸ್ ಸಿಬ್ಬಂದಿಯವರಿಗು ಮತ್ತು " ಆರಾಧ್ಯ ಮಹಾಸಭಾ " ಭವನದ ಸಂಸ್ಥೆಗು ಸಂಘದ ಆಡಳಿತ ಮಂಡಳಿ ಪರವಾಗಿ ವಂದನೆಗಳನ್ನು ಅರ್ಪಿಸಿದರು. |

**2023-24ನೇ ಸಾಲಿನ ಮಹಾಸಭೆಯ ಕಾರ್ಯ-ಕಲಾಪಗಳು ಮುಕ್ತಾಯಗೊಂಡವು.**

ಸಹಿ. | ಸಹಿ.

(ಅಂಜಲಿ ಎ.ಡಿ.)
ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿ

"ಯಥಾ ನಕಲು"

(ಎನ್.ಡಿ.ಸುಂದರ್)
ಅಧ್ಯಕ್ಷರು